# ಆರು ಬಂದವರವ್ವ ಆರವನಲ್ಲದೆ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 60.
2. **Note:** This kruti is not available in any other standard reference book that I referred.

ರಾಗ: -----　　　　　　ತಾಳ: -----

ಆರು ಬಂದವರವ್ವ ಆರವನಲ್ಲದೆ
ಮಾರಜನಕನಾದ ಶೌರಿಯಲ್ಲದೆ ಮತ್ತೆ　　॥ ಪ ॥

ಹೆಜ್ಜೆಗಳಿಡುತ ಕಾಣಿಸದಂತಿರೆ ಮೃದು-
ಗೆಜ್ಜೆಯ ದನಿ ಕೇಳಿ ಬರುತಲಿರೆ
ವಜ್ರ-ಮಾಣಿಕ-ಹಾರ ಹರಿದು ನೆಲಕೆ ಬಿದ್ದು
ಮಜ್ಜಿಗೆಯೊಳಗಿನ ಬೆಣ್ಣೆ ಕಾಣೆನಮ್ಮ　　॥ ೧ ॥

ಕೊಂಬು ಕೊಳಲು ತುತ್ತೂರಿ ಊದುತಲಿಕ್ಕು
ಇಂಬು ಕಸ್ತೂರಿ ಪರಿಮಳ ಸೂಸುತ
ಪೊಂಬಟ್ಟೆ ಚೆಲ್ಲಣ ಸೋಸಿದ ಮೊಸರಿನ
ಕುಂಭ ಒಡೆದು ಕೆಸರಾಗಿದೆಯಮ್ಮ　　॥ ೨ ॥

ಮಿಂಚಿನಂದದಿ ಹೊಳೆಯುತ ಬದಿಯಲ್ಲಿದ್ದ
ಸಂಚಿತಾರ್ಥಗಳೆಲ್ಲ ಸುರಾಡಿದ
ವಂಚನೆಯಿಲ್ಲದೆ ಭಕ್ತರ ಸಲಹಿದ
ಸಂಚುಕಾರ ಪುರಂದರ ವಿಠ್ಠಲನಲ್ಲದೆ　　॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಕಣ್ಣು ತಪ್ಪಿಸಿ ಮನೆಹೊಕ್ಕ ಬಾಲಕೃಷ್ಣನನ್ನು ಕುರಿತು ಗೊಲ್ಲತಿಯೊಬ್ಬಳು ಹೇಳಿದ ಮಾತುಗಳಿವು.

**ಶೌರಿ** = ದೇವಮೀಢ ಮತ್ತು ಮಾರೀಷಾ ಇವರ ಮಗ.  ಇವನ ಮಗನೇ ವಸುದೇವ.  ಕೃಷ್ಣನು ಇವನ ಮೊಮ್ಮೊಗನಾದುದರಿಂದ ಶೌರಿ ಎಂಬ ಹೆಸರು ಬಂದಿದೆ.

**ಇಂಬು** = ಹೆಚ್ಚಾಗಿ, ವ್ಯಾಪಕವಾಗಿ

**ಸಂಚಿತಾರ್ಥ** = ಕೂಡಿಟ್ಟ ವಸ್ತುಗಳು, ಸಂಚಿತ ಕರ್ಮಗಳು

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, gejje, vajra, benne, kolalu, Kasturi, karma, mosa,
**Pravachana:** NA
**Explanation:** NA